# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

### ಎಸ್.ಸಿ. ನಂ. 36/2014

**ದೋ.ಸಾ. : 29 ಫ್ರಾ.ಸಾ. : 32**

| | | |
|---|---|---|
| ಸಾಕ್ಷಿಯ ಹೆಸರು | : | ಭಾಗ್ಯಲಕ್ಷ್ಮಿ ವಿಶ್ವನಾಥ ಇಲ್ಲನ್ ಗುಡಿ |
| ಗಂಡನ ಹೆಸರು | : | ವಿಶ್ವನಾಥ ಇಲ್ಲನ್ ಗುಡಿ |
| ವಯಸ್ಸು | : | 36 ವರ್ಷ |
| ಕೆಲಸ | : | ಕೂಲಿ |
| ವಾಸ | : | ರಾಜೀವ ನಗರ, ಕದ್ರಾ, ಕಾರವಾರ |

**ದಿನಾಂಕಃ 03-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ಚಾಸಾ-30 ವಿಶ್ವನಾಥ ಇಲ್ಲನ್ ಗುಡಿ ನನ್ನ ಗಂಡ. ನಾವು ಕದ್ರಾದ ರಾಜೀವ ನಗರದಲ್ಲಿ ವಾಸವಾಗಿರುತ್ತೇವೆ. ಮೃತ ವೇಲು ನನ್ನ ಗಂಡನ ಅಣ್ಣ, ಜಾನಕಿ ಮೃತ ವೇಲು ರವರ ಹೆಂಡತಿ, ಅವರಿಗೆ ಎರಡು ಜನ ಮಕ್ಕಳು ಅಂದರೆ ಮೃತೆ ಅಶ್ವಿನಿ ಹಾಗೂ ಮೃತ ಸತ್ಯ ನಾರಾಯಣ ಮೂರ್ತಿ, ಅವರೂ ಸಹ ನಮ್ಮ ಮನೆಯಿಂದ ಸುಮಾರು 300 ಮೀಟರ್ ದೂರದಲ್ಲಿ ವಾಸವಾಗಿದ್ದರು. ವೇಲು ರವರ ಮನೆಯು ಸಿಮೆಂಟ್ ಸೀಟಿನ ಮನೆಯಾಗಿದ್ದು, ಮನೆಯ ನೆಲವು ಸಿಮೆಂಟ್ ನೆಲವಾಗಿರುತ್ತದೆ, ಅದೇ ರೀತಿ ಅವರ ಮನೆಗೆ ವಿದ್ಯುತ್ ದೀಪದ ಬೆಳಕಿನ ವ್ಯವಸ್ಥೆ ಇತ್ತು. ಅವರ ಮನೆಯಲ್ಲಿ ಒಟ್ಟು ನಾಲ್ಕು ಕೋಣೆಗಳಿದ್ದವು. ವೇಲು ರವರು ತನ್ನ ಮನೆಗೆ ಹೊಂದಿಕೊಂಡಂತೆ ಪಂಚರ್ ಅಂಗಡಿಯನ್ನು ಇಟ್ಟುಕೊಂಡಿದ್ದರು. ಅವರ ಮನೆಯ ಮುಂದುಗಡೆ ಸಹ ಬೀದಿ ದೀಪದ ಬೆಳಕು ಇರುತ್ತದೆ. ವೇಲು ರವರಿಗೆ ಒಂದು ಕಾಲು ಮಾತ್ರ ಇದ್ದು, ಅವರು ಎರಡು ಊರುಗೋಲುಗಳ ಸಹಾಯದಿಂದ ನಡೆಯುತ್ತಿದ್ದರು. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತು, ಆತನ ಹೆಸರು ಗುಸ್ತಿನ ಗ್ರೇಗೂರಿಯಾಗಿದ್ದು, ಆತನನ್ನು ಊರಿನಲ್ಲಿ ಎಲ್ಲರೂ ಗಿರಿ ಎಂದು ಕರೆಯುತ್ತಾರೆ. ಈ ಪ್ರಕರಣದ ಘಟನೆ ನಡೆಯುವ ಪೂರ್ವದಲ್ಲಿ ಆತ ಮೃತ ವೇಲು ರವರ ಮನೆಗೆ ಆಗಾಗ ಬಂದು ಹೋಗುತ್ತಿದ್ದನು.

2. ದಿಃ 14-02-2014 ರಂದು ನಾನು ನಮ್ಮ ಮನೆಯಲ್ಲಿದ್ದೆ ಹಾಗೂ ನನ್ನ ಗಂಡ ಚಾಸಾ-30 ವಿಶ್ವನಾಥ ಇಲ್ಲನ್ ಗುಡಿ ಹಿಂದಿನ ದಿನವೇ ಬೆಂಗಳೂರಿಗೆ ಕೂಲಿ ಕೆಲಸಕ್ಕೆ ಹೋಗಿದ್ದರು. ಆ ದಿನ ರಾತ್ರಿ 11-10 ರ ಸುಮಾರಿಗೆ ನಾನು ಮನೆಯಲ್ಲಿದ್ದಾಗ, ಊರಿನ ಜನರು ನನ್ನ ಮನೆಯ ಹತ್ತಿರ ಬಂದು, ವೇಲು ರವರ ಮನೆಯಲ್ಲಿ ಅಶ್ವಿನಿಯ ಕೊಲೆಯಾಗಿದೆ ಹಾಗೂ ಜಾನಕಿಗೆ ಕೈ ತುಂಡಾಗಿದೆ ಮತ್ತು ಹಣೆಯ ಹತ್ತಿರ ಗಾಯವಾಗಿದೆ ಮತ್ತು ವೇಲು ಹಾಗೂ ಆತನ ಮಗ ಸತ್ಯ ನಾರಾಯಣ ಮೂರ್ತಿ ಮನೆಯಲ್ಲಿ ಕಾಣಿಸುತ್ತಿಲ್ಲ ಎಂದು ತಿಳಿಸಿರುತ್ತಾರೆ. ನಂತರ ನಾನು ವೇಲು ರವರ ಮನೆಯ ಬಳಿ ಹೋದಾಗ, ಅಲ್ಲಿ ಊರಿನ ಜನರು ಸೇರಿದ್ದರು ಹಾಗೂ ಪೊಲೀಸರು ಸಹ ಬಂದಿದ್ದರು. ಆ ನಂತರ ನಾನು ವೇಲು ರವರ ಮನೆಯ ಹೊರಗಿನ ಬಾಲಿಲಲ್ಲಿ ನಿಂತು ನೋಡಲಾಗಿ, ವೇಲು ರವರ ಮನೆಯಲ್ಲಿ ವಿದ್ಯುತ್ ದೀಪದ ಬೆಳಕು ಇರಲಿಲ್ಲ, ಬಾಗಿಲು ತೆಗೆದಿದ್ದು, ಮನೆಯ ಹಾಲ್ ನಲ್ಲಿ ದೇವರ ದೀಪದ ಬೆಳಕು ಇತ್ತು, ನಂತರ ನಾನು ನನ್ನ ಬಳಿ ಇದ್ದ ಮೊಬೈಲ್ ಟಾರ್ಚ್ ನಿಂದ ನೋಡಿದಾಗ, ಅಶ್ವಿನಿಯು ನೆಲದ ಮೇಲೆ ಬಿದಿದ್ದಳು, ಆಕೆಯ ಎಡ ಮುಂಗೈ ತುಂಡಾಗಿ ನೇತಾಡುತ್ತಿತ್ತು, ಎಡ ಕುತ್ತಿಗೆಯ ಬಳಿ ಗಲ್ಲದಿಂದ ಹಿಂಬದಿವರೆಗೆ ಕತ್ತಿಯಿಂದ ಕಡಿದ ಗಾಯವಾಗಿ ರಕ್ತ ಬರುತ್ತಿತ್ತು, ಅದೇ ರೀತಿ ಜಾನಕಿಯ ಎಡಗೈ ತುಂಡಾಗಿ, ರಕ್ತ ಬರುತ್ತಿತ್ತು ಹಾಗೂ ಹಣೆಯ ಮೇಲೆ ಸಹ ಕತ್ತಿಯಿಂದ ಕಡಿದ ಗಾಯವಾಗಿ ರಕ್ತ ಬರುತ್ತಿದ್ದು, ಆಕೆಯು ಮಾತನಾಡುತ್ತಿರಲಿಲ್ಲ ಹಾಗೂ ಮನೆಯ ಹಾಲ್ ಹಾಗೂ ಅವರ ಬೆಡ್ ರೂಮ್ ನಲ್ಲಿ ರಕ್ತ ಚೆಲ್ಲಿತ್ತು. ಆದರೆ ವೇಲು ಹಾಗೂ ಆತನ ಮಗ ಸತ್ಯ ನಾರಾಯಣ ಮೂರ್ತಿ ಅಲ್ಲಿ ಕಾಣಿಸಲಿಲ್ಲ.

3. ನಂತರ ನಾನು ಈ ವಿಷಯವನ್ನು ತಿಳಿಸಲು ಬೆಂಗಳೂರಿನಲ್ಲಿದ್ದ ನನ್ನ ಗಂಡನಿಗೆ ಕರೆ ಮಾಡಿದ್ದು, ಮೊಬೈಲ್ ಕರೆ ತಾಗಿರುವುದಿಲ್ಲ. ಆದ್ದರಿಂದ ನಾನು ತಮ್ಮನಾದ ಈಶ್ವರನಿಗೆ ಕರೆ ಮಾಡಿ, ವಿಷಯ ತಿಳಿಸಿರುತ್ತೇನೆ. ಆ ನಂತರ ಪೊಲೀಸರು ಜಾನಕಿಯನ್ನು ಪೊಲೀಸ್ ಜೀಪ್ ನಲ್ಲಿ ಕೆ.ಪಿ.ಸಿ ಆಸ್ಪತ್ರೆಗೆ ಕರೆದುಕೊಂಡು ಹೋದರು ಹಾಗೂ ಅಶ್ವಿನಿಯ ಶವ ಮನೆಯ ಹಾಲ್ ನಲ್ಲಿ ಬಿದ್ದಿತ್ತು. ನನಗೆ ಸಣ್ಣ ಮಗು ಮನೆಯಲ್ಲಿದ್ದ ಕಾರಣ ಹಾಗೂ ನನ್ನ ಗಂಡ ಆ ದಿನ ಮನೆಯಲ್ಲಿ ಇಲ್ಲದ ಕಾರಣ, ನಾನು ನನ್ನ ಮನೆಗೆ ಹೋಗಿರುತ್ತೇನೆ. ಆ ನಂತರ ಊರಿನ ಜನರೆಲ್ಲರೂ ಸೇರಿ ವೇಲು ಹಾಗೂ ಸತ್ಯ ನಾರಾಯಣ ಮೂರ್ತಿ ಗಾಗಿ ಹುಡುಕಾಡತ್ತಿರುವಾಗ, ರಾತ್ರಿ 01-00 ಗಂಟೆ ಸುಮಾರಿಗೆ ವೇಲು ರವರ ಮನೆಯ ಹತ್ತಿರದಲ್ಲಿರುವ ಕೊಡಸಳ್ಳಿ ಕಡೆಗೆ

ಹೋಗುವ ಅರಣ್ಯದ ಕಾಲು ದಾರಿಯಲ್ಲಿ ವೇಲು ಹಾಗೂ ಸತ್ಯ ನಾರಾಯಣ ಮೂರ್ತಿಯ ಶವ ಬಿದ್ದಿರುತ್ತದೆ ಎಂದು ವಿಷಯ ಗೊತ್ತಾಗಿ ನಾನು ಬೆಳಿಗ್ಗೆ ಹೋಗಿ ನೋಡಿದಾಗ, ಕೊಡಸಳ್ಳಿ ಕಡೆಗೆ ಹೋಗುವ ಅರಣ್ಯದ ಕಾಲು ದಾರಿಯಲ್ಲಿ ವೇಲು ಹಾಗೂ ಸತ್ಯ ನಾರಾಯಣ ಮೂರ್ತಿಯ ಶವಗಳು ಸ್ವಲ್ಪ ದೂರದಲ್ಲಿ ಬಿದ್ದಿದ್ದವು, ವೇಲುವಿನ ಶವದ ಪಕ್ಕದಲ್ಲಿ ಊರುಗೋಲುಗಳು ಸಹ ಬಿದ್ದಿದ್ದವು. ವೇಲು ಹಾಗೂ ಸತ್ಯ ನಾರಾಯಣ ಮೂರ್ತಿಯ ಕುತ್ತಿಗೆಗೆ ಕತ್ತಿಯಿಂದ ಕಡಿದ ಗಾಯವಾಗಿ, ರಕ್ತ ಸುರಿದಿತ್ತು. ಸದರಿ ಕಾಲು ದಾರಿಯು ಮಣ್ಣಿನ ಕಾಲು ದಾರಿಯಾಗಿದ್ದು, ಸುತ್ತಲೂ ರಕ್ತ ಚೆಲ್ಲಿತ್ತು.

**(ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ